**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಫ್ರಾ.ಸಾ.21**

**ಚಾ.ಸಾ.28**

| | | |
|---|---|---|
| ಸಾಕ್ಷಿದಾರರ ಹೆಸರು | - | ದಿನೇಶ್ ಪೂಜಾರಿ |
| ತಂದೆಯ ಹೆಸರು | - | ಸುರೇಂದ್ರ ಪೂಜಾರಿ |
| ವಯಸ್ಸು | - | 46 ವರ್ಷ |
| ಉದ್ಯೋಗ | - | ಖಾಸಗಿ |
| ವಿಳಾಸ | - | ಆತ್ರಾಡಿ |

ದಿನಾಂಕಃ 05-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಮೃತನ ಪರಿಚಯ ಇರುವುದಿಲ್ಲ. 1 ಮತ್ತು 2 ನೇ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ, ಅವರ ಪರಿಚಯ ಇರುವುದಿಲ್ಲ. ಈಗ ತೋರಿಸಿದ 8 ದಾಖಲೆಗಳಿಗೆ ಪೋಲಿಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸ್ರದ್ರಿ ದಾಖಲೆಗಳಲ್ಲಿ ಬರೆದಿರುವ ವಿಚಾರ ತಿಳಿದಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೋಲಿಸರು ಯಾವುದೇ ಸ್ಥಳ ಪರಿಶೀಲಿಸಿರುವುದಿಲ್ಲ. ಯಾವುದೇ ಸೊತ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. 1 ಮತ್ತು 2 ನೇ ಆರೋಪಿತರು ಪೋಲಿಸರ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಈಗ ತೋರಿಸಿದ 8 ಪಂಚನಾಮೆ ಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-32 ಮತ್ತು 35 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-32(ಸಿ) ಮತ್ತು ನಿಪಿ-35(ಸಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ 6 ಪಂಚನಾಮೆಗಳಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ಧು, ಸ್ರದ್ರಿ ಪಂಚನಾಮೆಗಳನ್ನು ನಿಪಿ-48, 49, 52, 54 ಎಂದು ಈಗಾಗಲೇ ಗುರುತಿಸಲಾಗಿದ್ಧು, ಸಾಕ್ಷಿಯ ಸಹಿಯನ್ನು ನಿಪಿ-48(ಬಿ), 49(ಬಿ), 52(ಬಿ), 54(ಬಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 12-01-2017 ರಂದು ಪೋಲಿಸರು ನನ್ನ ಹಾಗೂ ಸಹ ಪಂಚರ ಸಮಕ್ಷಮದಲ್ಲಿ ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಶವದ ಮೇಲೆ ಇದ್ದ ಸೊತ್ತುಗಳನ್ನು ಪೋಲಿಸ್ ಸಿಬ್ಬಂದಿಯ ವಶಕ್ಕೆ ಕೊಟ್ಟಿದ್ದು ಪೋಲಿಸ್ ಸಿಬ್ಬಂದಿ ತನಿಖಾಧಿಕಾರಿ ಸಮಕ್ಷಮ ಹಾಜರುಪಡಿಸಿದ ಕಪ್ಪು ಬಣ್ಣದ ತುಂಬು ತೋಳಿನ ರೆಡಿಮೇಡ್ ಅಂಗಿ, ನೀಲಿ ಮತ್ತು ಬಿಳಿ ಬಣ್ಣದ ಬೈರಾಸು, ಬಿಳಿ ಬಣ್ಣದ ದೊಡ್ಡ ಪ್ಲಾಸ್ಟಿಕ್ ಚೀಲ-3, ಶವದ ಕೈ ಕಟ್ಟಲು ಹಗ್ಗವಾಗಿ ಬಳಸಿದ ಪ್ಲಾಸ್ಟಿಕ್ ಚೀಲದ ಸಣ್ಣ ತುಂಡನ್ನು ಅಮಾನತ್ತುಪಡಿಸಿಕೊಂಡಿದ್ದು, ಪೋಲಿಸರು ನಿಪಿ-48 ರಂತೆ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ದಿನಾಂಕ 13-01-2017 ರಂದು ಪೋಲಿಸ್ ಅಭಿರಕ್ಷೆಯಲಿದ್ದ 2 ನೇ ಆರೋಪಿ ಕೊಟ್ಟ ಸ್ವಇಚ್ಚಾ ಹೇಳಿಕೆಯ ಆಧಾರದ ಮೇಲೆ ಕೃತ್ಯವನ್ನು ಮರೆ ಮಾಚುವ ಸಂಬಂಧ 1 ಮತ್ತು 2 ನೇ ಆರೋಪಿತರು ಸೇರಿಕೊಂಡು ಒಂದು ಕರುವನ್ನು ಸುಟ್ಟು ಹಾಕಿದ ಸ್ಥಳವನ್ನು ತೋರಿಸಿಕೊಟ್ಟಿದ್ದು, ಸದ್ರಿ ಸ್ಥಳವನ್ನು ಪರಿಶೀಲಿಸಲಾಗಿ, ಪೆರ್ಣಂಕಿಲ ಗ್ರಾಮದ ವರ್ವಾಡಿ ಕೆರೆ ಬದಿಯ ಸ್ಥಳವಾಗಿದ್ದು, ಸದ್ರಿ ಸ್ಥಳದಲ್ಲಿ ಒಣಗಿಸಿ ಇಟ್ಟಿದ್ದ ಚರ್ಮವನ್ನು ಆರೋಪಿ ತೋರಿಸಿ ಹಾಜರುಪಡಿಸಿದ್ದು, ಸದ್ರಿ ಚರ್ಮವನ್ನು ಪರಿಶೀಲಿಸಿ ಮತ್ತು ಕೃತ್ಯದ ಸಮಯ ಉಪಯೋಗಿಸಿದ ಹಾರೆಯನ್ನು ಸಹಾ ಹಾಜರುಪಡಿಸಿದ್ದು, ನಿಪಿ-49 ರಂತೆ ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-50 ಮತ್ತು 51 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕ 13-01-2017 ರಂದು 3 ನೇ ಆರೋಪಿ ಕೊಟ್ಟ ಸ್ವ ಇಚ್ಚಾ ಹೇಳಿಕೆಯ ಆಧಾರದ ಮೇಲೆ ಆತನ ನಮ್ಮನ್ನು ಮತ್ತು ಪೋಲಿಸರನ್ನು ಪೆರ್ಣಂಕಿಲ ಗ್ರಾಮದ ದೇವಸ್ಥಾನದ ರಸ್ತೆಯ ಬಳಿ ಇರುವ ಹಾಡಿಗೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಇತರೆ ಆರೋಪಿತರೊಂದಿಗೆ ಸೇರಿಕೊಂಡು ಮೃತನನ್ನು ಕೊಲೆ ಮಾಡಿದ್ದು ಎಂದು ತೋರಿಸಿಕೊಟ್ಟಿದ್ದು ಸದ್ರಿ ಸ್ಥಳದಲ್ಲಿ ನಿಪಿ-52 ರಂತೆ ಸ್ಥಳ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-53 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

4. ದಿನಾಂಕ 13-01-2017 ರಂದು 2 ನೇ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಕಟ್ಟಿಂಗೇರಿ ಗ್ರಾಮದ ಕಪ್ಪಂದಕರಿಯ ಸೇತುವೆ ಬಳಿ ಕರೆದುಕೊಂಡು ಹೋಗಿ ಕೊಲೆ ನಡೆಸಿದ ಸ್ಥಳದಿಂದ ಮಣ್ಣು ಮತ್ತು ತರಗೆಲೆಗಳನ್ನು ಬಾಚಿ ತೆಗೆದು ಇದೇ ಸ್ಥಳದಲ್ಲಿ ಎಸದಿರುವುದಾಗಿ ತಿಳಿಸಿದ್ದು ಸದ್ರಿ ನದಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿರುವುದರಿಂದ ಮಣ್ಣು ಮತ್ತು ತರಗೆಲೆಗಳು ದೊರಕಿರುವುದಿಲ್ಲವೆಂದು ನಿಪಿ-54 ರಂತೆ ಮಹಜರು ಬರೆದು ನನ್ನ ಸಹಿ ಪಡದುಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-55 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

5. ನಂತರ ದಿನಾಂಕ 13-01-2017 ರಂದು 2 ಮತ್ತು 3 ನೇ ಆರೋಪಿತರು ಕೊಟ್ಟ ಸ್ವಇಚ್ಛಾ ಹೇಳಿಕೆಯ ಆಧಾರದಲ್ಲಿ ಆರೋಪಿತರು ನಮ್ಮನ್ನು ಮೂಡುಬೆಳ್ಳೆ ಪೇಟೆಯಲ್ಲಿರುವ ಹಾರ್ಡ್‌ವೇರ್ ಅಂಗಡಿಗೆ ಕರೆದುಕೊಂಡು ಹೋಗಿ ಇದೇ ಅಂಗಡಿಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಸರಪಳಿಯನ್ನು ಖರೀದಿಸಿರುವುದಾಗಿ ತಿಳಿಸಿದ್ದು, ಪೋಲಿಸರು ನಿಪಿ-34 ರಂತೆ ಸ್ಥಳ ಮಹಜರು ಬರೆದು ನನ್ನ ಸಹಿಯನ್ನು ಸ್ಥಳದಲ್ಲಿಯೇ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-36 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

6. ದಿನಾಂಕ 13-01-2017 ರಂದು 2 ನೇ ಆರೋಪಿ ಕೊಟ್ಟ ಸ್ವ ಇಚ್ಛಾ ಹೇಳಿಕೆಯಂತೆ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಮೂಡುಬೆಳ್ಳೆ ಪೇಟೆಯಲ್ಲಿರುವ ಸಂಜೀವ ಅಮೀನ್ ರ ಬಾಬ್ತು ಅಂಗಡಿಗೆ ಕರೆದುಕೊಂಡು ಹೋಗಿ ಇದೇ ಅಂಗಡಿಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಬೀಗವನ್ನು ಖರೀದಿಸಿರುವುದಾಗಿ ಹೇಳಿದ್ದು, ಸದ್ರಿ ಸ್ಥಳವನ್ನು ಪೋಲಿಸರು ಪರಿಶೀಲಿಸಿ ನಿಪಿ-35 ರಂತೆ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ 36 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.